**ಕರ್ನಾಟಕ ವಿಧಾನ ಪರಿಷತ್**

| | | |
|---|---|---|
| **ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** | : | **ಶ್ರೀ ಮಧು ಜಿ.ಮಾದೇಗೌ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ** | : | **249** |
| **ಉತ್ತರಿಸಬೇಕಾದ ದಿನಾಂಕ** | : | **10.12.2024** |
| **ಉತ್ತರಿಸಬೇಕಾದ ಸಚಿವರು** | : | **ಸಹಕಾರ ಸಚಿವರು** |

| **ಕ್ರ. ಸಂ** | **ಪ್ರಶ್ನೆ** | **ಉತ್ತರ** |
|---|---|---|
| (ಅ) | 2024-25ನೇ ಸಾಲಿಗೆ ಯಶಸ್ವಿನಿ ಆರೋಗ್ಯ ಯೋಜನೆಯಡಿ ರಾಜ್ಯದಾದ್ಯಂತ ಸದಸ್ಯರ ನೋಂದಣಿ ಮತ್ತು ಸದಸ್ಯತ್ವ ನವೀಕರಣ ಪ್ರಕ್ರಿಯೆ ಎಂದಿನಿಂದ ಆರಂಭ ಆಗಲಿದೆ; ಎಷ್ಟು ಲಕ್ಷ ಸದಸ್ಯರನ್ನು ನೋಂದಾಯಿಸುವ ಗುರಿ ಹೊಂದಲಾಗಿದೆ; (ವಿವರನೀಡುವುದು) | 2024-25ನೇ ಸಾಲಿಗೆ ಯಶಸ್ವಿನಿ ಆರೋಗ್ಯ ಯೋಜನೆಯನ್ನು ಮುಂದುವರೆಸಲು ಸರ್ಕಾರವು ದಿನಾಂಕ:30-11-2024 ರಂದು ಆದೇಶ ಹೊರಡಿಸಿರುತ್ತದೆ. ಅಂತೆಯೇ ದಿನಾಂಕ:01-12-2024 ರಿಂದ ನೋಂದಣಿಮತ್ತು ನವೀಕರಣ ಪ್ರಕ್ರಿಯೆ ಪ್ರಾರಂಭವಾಗಿದೆ.<br>2024-25ನೇ ಸಾಲಿಗೆ 50.00 ಲಕ್ಷ ಸದಸ್ಯರನ್ನು ನೋಂದಾಯಿಸುವ ಗುರಿಯನ್ನು ಹೊಂದಲಾಗಿದೆ. |
| (ಆ) | ಸರ್ಕಾರ ವಾರ್ಷಿಕ ವಂತಿಕೆ ಮೊತ್ತವನ್ನು ಪರಿಷ್ಕರಿಸಲು ಉದ್ದೇಶಿಸಿದೆಯೇ: (ವಿವರ ನೀಡುವುದು) | ಇಲ್ಲ |
| (ಇ) | 2023-24ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಯಡಿ ನೋಂದಾಯಿಸಲ್ಪಟ್ಟ ಸದಸ್ಯರ ಸಂಖ್ಯೆ ಎಷ್ಟು: ಸಂಗ್ರಹಿಸಲಾದ ವಂತಿಕೆ ಮೊತ್ತ ಎಷ್ಟು: ನೋಂದಾಯಿತ ಸದಸ್ಯರ ಪೈಕಿ ವೈದ್ಯಕೀಯ ಚಿಕಿತ್ಸೆ ಪಡೆದವರ ಸಂಖ್ಯೆ ಎಷ್ಟು: (ವರ್ಷವಾರು, ಜಿಲ್ಲಾವಾರು ಮಾಹಿತಿ ನೀಡುವುದು) | 2023-24ನೇ ಸಾಲಿನಲ್ಲಿ ಯೋಜನೆಯಡಿ ಸುಮಾರು 41.57 ಲಕ್ಷ ಫಲಾನುಭವಿಗಳು ನೋಂದಾಯಿಸಿಕೊಂಡಿದ್ದು, ರೂ.47.76 ಕೋಟಿ ವಂತಿಕೆ ಮೊತ್ತ ಸಂಗ್ರಹವಾಗಿದೆ.<br>2023-24ನೇ ಸಾಲಿನಲ್ಲಿ ನೋಂದಾಯಿಸಿದ ಸದಸ್ಯರಿಗೆ ಏಪ್ರಿಲ್ 2024 ರಿಂದ ಮಾರ್ಚ್ 2025 ರವರೆಗೆ ಚಿಕಿತ್ಸೆಗೆ ಅವಕಾಶಕಲ್ಪಿಸಿದ್ದು, ಅದರಂತೆ ಇಲ್ಲಿಯವರೆಗೆ 46000 ಫಲಾನುಭವಿಗಳು ವೈದ್ಯಕೀಯ ಚಿಕಿತ್ಸೆಗಳನ್ನು ರಾಜ್ಯಾದ್ಯಂತ ಇರುವ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಪಡೆದಿರುತ್ತಾರೆ.<br>ವರ್ಷವಾರು, ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ -1**ರಲ್ಲಿ ನೀಡಲಾಗಿದೆ. |

| | | |
|---|---|---|
| (ಈ) | 2022-23 ಮತ್ತು 2023-24ನೇ ಸಾಲಿನಲ್ಲಿ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಭರಿಸಲಾಗಿರುವ ಮತ್ತು ಭರಿಸಲು ಬಾಕಿ ಇರುವಮೊತ್ತ ಎಷ್ಟು: (ಸಂಪೂರ್ಣ ವಿವರ ನೀಡುವುದು) | ಜನವರಿ 2023 ರಿಂದ ಮಾರ್ಚ್ 2024 (2022-23) ರವರೆಗೆ 66279 ಫಲಾನುಭವಿಗಳು ಚಿಕಿತ್ಸೆ ಪಡೆದಿದ್ದು, ಚಿಕಿತ್ಸೆ ಬಾಬ್ತು 108.75 ಕೋಟಿ ಮೊತ್ತದ ಬಿಲ್ಲುಗಳನ್ನುನೆಟ್‌ವರ್ಕ್ ಆಸ್ಪತ್ರೆಗಳಿಗೆ ಪಾವತಿ ಮಾಡಲಾಗಿದೆ. ಸದರಿ ಸಾಲಿನಲ್ಲಿ ಆಸ್ಪತ್ರೆಗಳಿಗೆ ಯಾವುದೇಮೊತ್ತವನ್ನು ಪಾವತಿಸಲು ಬಾಕಿ ಇರುವುದಿಲ್ಲ.<br><br>2023-24ನೇ ಸಾಲಿನಲ್ಲಿ ಏಪ್ರಿಲ್ 2024 ರಿಂದ ಇಲ್ಲಿಯವರೆಗೆ 46000 ಫಲಾನುಭವಿಗಳು ಚಿಕಿತ್ಸಾ ಬಾಬ್ತು 82.31 ಕೋಟಿ ಮೊತ್ತದ ಚಿಕಿತ್ಸೆ ಪಡೆದಿದ್ದು. ಈ ಪೈಕಿ 23527 ಫಲಾನುಭವಿಗಳ ಚಿಕಿತ್ಸಾ ಬಾಬ್ತು ರೂ.38.91 ಕೋಟಿ ಮೊತ್ತದ ಬಿಲ್ಲುಗಳನ್ನು ನೆಟ್‌ವರ್ಕ್‌ಆಸ್ಪತ್ರೆಗಳಿಗೆ ಈಗಾಗಲೇ ಪಾವತಿಸಲಾಗಿದೆ. 22473 ಚಿಕಿತ್ಸಾ ಪ್ರಕರಣಗಳ ಬಿಲ್ಲುಗಳನ್ನು ಪರಿಶೀಲನೆಗೆಒಳಪಡಿಸಲಾಗಿದ್ದು, ರೂ.43.40 ಕೋಟಿ ಮೊತ್ತವನ್ನು ನೆಟ್‌ವರ್ಕ್ ಆಸ್ಪತ್ರೆಗಳಿಗೆ ಪಾವತಿಸಲು ಬಾಕಿ ಇರುತ್ತದೆ. |
| (ಉ) | ಯೋಜನೆಯಡಿ ನೋಂದಾಯಿತ ಆಸ್ಪತ್ರೆಗಳ ಸಂಖ್ಯೆ ಮತ್ತು ಖಾಸಗಿ ಆಸ್ಪತ್ರೆಗಳ ಸಂಖ್ಯೆ ಎಷ್ಟು: ಲಭ್ಯವಿರುವ ಚಿಕಿತ್ಸೆಗಳ ಸಂಖ್ಯೆ,ದರ ಪರಿಷ್ಕರಣೆಗೆ ಒಳಗಾದ ಚಿಕಿತ್ಸೆಗಳ ಸಂಖ್ಯೆ ಎಷ್ಟು: ಹಾಗೂಯೋಜನೆ ಮರು ಜಾರಿ ಬಳಿಕ ಎಷ್ಟುಚಿಕಿತ್ಸೆಗಳನ್ನು ಹೆಚ್ಚುವರಿಯಾಗಿ ಸೇರಿಸಲಾಗಿದೆ: | ಯಶಸ್ವಿನಿ ಯೋಜನೆಯಡಿ ಇಲ್ಲಿಯವರೆಗೆ 700 ನೆಟ್ ವರ್ಕ್ ಆಸ್ಪತ್ರೆಗಳು ನೋಂದಣಿಯಾಗಿದ್ದು, ಈ ಪೈಕಿ 37 ಸರ್ಕಾರಿ ಆಸ್ಪತ್ರೆಗಳು ಹಾಗೂ 663 ಖಾಸಗಿ ಆಸ್ಪತ್ರೆಗಳು ಇರುತ್ತವೆ.<br><br>ಈ ಯೋಜನೆಯಡಿ ಇತರೆ ಅನುಸೂಚಿತ ಸಾಮಾನ್ಯ ರೋಗಗಳಿಗೆ ಸಂಬಂಧಿಸಿದಂತೆ ಒಟ್ಟು1650 ಚಿಕಿತ್ಸೆಗಳು ಮತ್ತು 478 ICU ಚಿಕಿತ್ಸೆಗಳೂ ಸೇರಿ ಒಟ್ಟು 2128 ಚಿಕಿತ್ಸಾ ಸೌಲಭ್ಯಗಳನ್ನು ರಾಜ್ಯದ ಯಶಸ್ವಿನಿ ನೆಟ್‌ವರ್ಕ್‌ಆಸ್ಪತ್ರೆಗಳಲ್ಲಿ ಒದಗಿಸಲಾಗುತ್ತಿದೆ.<br><br>ರಾಜ್ಯದ ಪ್ರಮುಖ ಆಸ್ಪತ್ರೆಗಳು ಯಶಸ್ವಿನಿ ಚಿಕಿತ್ಸಾ ದರ ಕಡಿಮೆ ಇರುವುದೆಂದು ಭಾವಿಸಿ ಯಶಸ್ವಿನಿ ಯೋಜನೆಯಡಿ ನೋಂದಾಯಿಸಿಕೊಂಡಿರುವುದಿಲ್ಲ. ಈ ಸಂಬಂಧ ಆಸ್ಪತ್ರೆಗಳ ಆಕ್ಷೇಪಣೆಗಳನ್ನು ಸರ್ಕಾರವು ಪರಿಗಣಿಸಿ ಈ ಹಿಂದೆ ಜಾರಿಯಲ್ಲಿದ್ದ ಯಶಸ್ವಿನಿ ಯೋಜನೆಯಲ್ಲಿ ಇದ್ದ ಚಿಕಿತ್ಸೆ ದರಗಳು ಹೆಚ್ಚಿದ್ದಲ್ಲಿಆ ದರಗಳನ್ನು ಅಥವಾ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ದರಗಳು ಹೆಚ್ಚಿದ್ದಲ್ಲಿ ಆ ದರಗಳನ್ನುಪರಿಗಣಿಸಲು ಅಂದರೆ ಯಾವ ದರ ಅನುಕೂಲ ಆಗುತ್ತದೆಯೋ ಅದನ್ನು ಪರಿಗಣಿಸಲು ಸೂಚಿಸಿ ದಿನಾಂಕ:24-01-2023 ರಂದು ಸರ್ಕಾರವು ಆದೇಶ ಹೊರಡಿಸಿರುತ್ತದೆ.<br><br>(ಪ್ರತಿಯನ್ನು **ಅನುಬಂಧ - 2**ರಲ್ಲಿ ನೀಡಲಾಗಿದೆ.) |

| | | |
|---|---|---|
| | | ಪರಿಷ್ಕೃತ ದರಗಳು ದಿನಾಂಕ 25-01-2023 ರಿಂದ ಪೂರ್ವಾನ್ವಯವಾಗುವಂತೆ ಅಳವಡಿಸಿಕೊಂಡು ಜಾರಿಗೊಳಿಸಲಾಗಿದೆ. ಇದರಿಂದ ಯಶಸ್ವಿನಿ ಯೋಜನೆಯಡಿ ಅಳವಡಿಸಿಕೊಂಡಿರುವ ಚಿಕಿತ್ಸೆಗಳಪೈಕಿ 206 ಚಿಕಿತ್ಸಾ ದರಗಳಲ್ಲಿ ಹೆಚ್ಚಳವಾಗಿದೆ.<br><br>ಯಶಸ್ವಿನಿ ಯೋಜನೆಯಡಿ ಚಿಕಿತ್ಸೆಗಳ ದರ ಪರಿಷ್ಕರಿಸಲು ಸರ್ಕಾರವು ಡಾ॥ ಶ್ರೀನಿವಾಸ ಎನ್.ಟಿ. ಇವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯನ್ನು ರಚಿಸಿದ್ದು ಚಿಕಿತ್ಸೆಗಳ ದರ ಪರಿಷ್ಕರಣೆಯು ಪರಿಶೀಲನೆಯಲ್ಲಿದೆ. |
| (ಊ) | ನೆಟ್‌ವರ್ಕ್ ಆಸ್ಪತ್ರೆಗಳು ಸದಸ್ಯರಿಂದ ಹಣ ಸಂಗ್ರಹಿಸಿರುವ ಬಗ್ಗೆ ದೂರುಗಳು ಸ್ವೀಕೃತವಾಗಿವೆಯೇ? (ವಿವರ ನೀಡುವುದು) | ನೆಟ್‌ವರ್ಕ್ ಆಸ್ಪತ್ರೆಗಳು ಸದಸ್ಯರಿಂದ ಹಣ ಸಂಗ್ರಹಿಸಿರುವ ಬಗ್ಗೆ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. |

**ಸಂಖ್ಯೆ: ಸಿಒ279ಸಿಎಲ್‌ಎಸ್ 2024**

K. N. Rajanna

**(ಕೆ.ಎನ್. ರಾಜಣ್ಣ)**
**ಸಹಕಾರ ಸಚಿವರು**

## ಅನುಬಂಧ 01

| ಕ್ರ. ಸಂ | ಜಿಲ್ಲೆಯ ಹೆಸರು | 2022-23 | 2023-24 |
|---|---|---|---|
| | | ಒಟ್ಟು ಸದಸ್ಯರು | ಒಟ್ಟು ಸದಸ್ಯರು |
| 1 | 2 | 3 | 4 |
| 1 | ಬೆಂಗಳೂರು ವಲಯ-1 | 68785 | 51322 |
| 2 | ಬೆಂಗಳೂರು ವಲಯ-2 | 38628 | 29428 |
| 3 | ಬೆಂಗಳೂರು ವಲಯ-3 | 57029 | 42577 |
| 4 | ಬೆಂಗಳೂರು ವಲಯ-4 | 73873 | 54506 |
| 5 | ಬೆಂಗಳೂರು ಗ್ರಾಮಾಂತರ | 111744 | 103764 |
| 6 | ರಾಮನಗರ | 157875 | 147299 |
| 7 | ತುಮಕೂರು | 301502 | 257223 |
| 8 | ಕೋಲಾರ | 93523 | 91483 |
| 9 | ಚಿಕ್ಕಬಳ್ಳಾಪುರ | 76389 | 82347 |
| 10 | ಚಿತ್ರದುರ್ಗ | 121450 | 122059 |
| 11 | ದಾವಣಗೆರೆ | 148395 | 160838 |
| 12 | ಶಿವಮೊಗ್ಗ | 235098 | 193295 |
| 13 | ಕಲಬುರಗಿ | 68500 | 67234 |
| 14 | ಬಳ್ಳಾರಿ | 61347 | 59041 |
| 15 | ವಿಜಯನಗರ | 101104 | 99587 |
| 16 | ಯಾದಗಿರಿ | 19011 | 20201 |
| 17 | ರಾಯಚೂರು | 114075 | 115670 |
| 18 | ಕೊಪ್ಪಳ | 79823 | 77696 |
| 19 | ಬೀದರ್ | 122398 | 120619 |
| 20 | ಮೈಸೂರು | 341017 | 325945 |
| 21 | ಚಾಮರಾಜನಗರ | 101976 | 101932 |
| 22 | ಮಂಡ್ಯ | 326119 | 278913 |
| 23 | ಹಾಸನ | 194043 | 189192 |
| 24 | ಚಿಕ್ಕಮಗಳೂರು | 139661 | 129937 |
| 25 | ಕೊಡಗು | 80512 | 77751 |
| 26 | ದಕ್ಷಿಣ ಕನ್ನಡ | 258101 | 207731 |
| 27 | ಉಡುಪಿ | 322188 | 71870 |
| 28 | ಬೆಳಗಾವಿ | 257359 | 272202 |
| 29 | ವಿಜಯಪುರ | 115738 | 98207 |
| 30 | ಬಾಗಲಕೋಟೆ | 204456 | 178247 |
| 31 | ಧಾರವಾಡ | 85130 | 53634 |
| 32 | ಗದಗ | 62128 | 59342 |
| 33 | ಹಾವೇರಿ | 102409 | 103609 |
| 34 | ಉತ್ತರ ಕನ್ನಡ | 183283 | 112792 |
| ಒಟ್ಟು | | **4824669** | **4157493** |

ಅನುಬಂಧ-2

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಯಶಸ್ವಿನಿ ಯೋಜನೆಯ ಕೆಲವು ಚಿಕಿತ್ಸಾ ದರಗಳ ಪರಿಷ್ಕರಣೆ ಬಗ್ಗೆ.

**ಉಲ್ಲೇಖ:** 2022-23ನೇ ಸಾಲಿನ ಅಯವ್ಯಯ ಭಾಷಣದ ಕಂಡಿಕೆ 67ರಲ್ಲಿನ ಘೋಷಣೆ.

***

**ಪ್ರಸ್ತಾವನೆ:**

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ 2022-23ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಘೋಷಿಸಿದಂತೆ ಯಶಸ್ವಿನಿ ಯೋಜನೆಯನ್ನು ಪರಿಷ್ಕರಿಸಿ ಆದೇಶ ಹೊರಡಿಸಲಾಗಿದೆ.

ಈ ಹಿಂದೆ ಸಹಕಾರ ಇಲಾಖೆಯಲ್ಲಿ ಯಶಸ್ವಿನಿ ಯೋಜನೆಯನ್ನು 2003 ರಲ್ಲಿ ಪ್ರಾರಂಭಿಸಿದ್ದು, 2003-04 ರಿಂದ 2017-18 ರವರೆಗೆ ಜಾರಿಯಲ್ಲಿದ್ದು ನಂತರ ದಿನಾಂಕ: 31-05-2018 ರಿಂದ ಈ ಯೋಜನೆಯು ಸ್ಥಗಿತಗೊಂಡಿರುತ್ತದೆ.

ಈ ಹಿಂದಿನ ಯಶಸ್ವಿನಿ ಯೋಜನೆಯು 823 ಶಸ್ತ್ರ ಚಿಕಿತ್ಸೆಗಳನ್ನು ಒಳಗೊಂಡಿತ್ತು. ಪ್ರಸ್ತುತ ಪರಿಷ್ಕೃತ ಯಶಸ್ವಿನಿ ಯೋಜನೆಯಡಿ ಆಯುಷ್ಮಾನ್ ಭಾರತ್ ಯೋಜನೆಯಡಿ ನಿಗದಿಪಡಿಸಿರುವ 1650 ಚಿಕಿತ್ಸೆಗಳನ್ನು ಅದೇ ದರಗಳೊಂದಿಗೆ ಅಳವಡಿಸಿಕೊಳ್ಳಲಾಗಿರುತ್ತದೆ.

ಭಾರತೀಯ ವೈದ್ಯಕೀಯ ಮಂಡಳಿ IMA,, ಕರ್ನಾಟಕ ಮೆಡಿಕಲ್ ಕೌನ್ಸಿಲ್ ಹಾಗೂ ಖಾಸಗಿ ಆಸ್ಪತ್ರೆಗಳ ಒಕ್ಕೂಟಗಳು ಈ ಹಿಂದೆ ಇದ್ದ ಯಶಸ್ವಿನಿ ಚಿಕಿತ್ಸಾ ದರಗಳಿಗಿಂತ ಈಗಿನ ದರಗಳು ಕಡಿಮೆ ಇರುವುದಾಗಿಯೂ, ರಾಷ್ಟ್ರಮಟ್ಟದಲ್ಲಿ ಆಯುಷ್ಮಾನ್ ಭಾರತ್ ದರಗಳು ಹೆಚ್ಚಿದ್ದರೂ, ರಾಜ್ಯದಲ್ಲಿ ಕಡಿಮೆ ದರಗಳನ್ನು ನಿಗದಿಪಡಿಸಿರುವುದಾಗಿ ಆಕ್ಷೇಪಿಸಿ ಯಶಸ್ವಿನಿ ಯೋಜನೆಯಲ್ಲಿ ನೋಂದಣಿಯಾಗಿರುವುದಿಲ್ಲ. ಇದರಿಂದಾಗಿ ಅನೇಕ ಜಿಲ್ಲೆಗಳಲ್ಲಿ ಯೋಜನೆಯ ಫಲಾನುಭವಿಗಳಿಗೆ ಚಿಕಿತ್ಸೆ ಪಡೆಯಲು ಕಷ್ಟಸಾಧ್ಯವಾಗಿರುತ್ತದೆ.

ಅಲ್ಲದೆ ಆಯುಷ್ಮಾನ್ ಭಾರತ್ ಯೋಜನೆಯಲ್ಲಿ ರೆಫರಲ್ ವ್ಯವಸ್ಥೆ ಇರುವುದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಅಥವಾ ಕಡಿಮೆ ದರದಲ್ಲಿ ಚಿಕಿತ್ಸೆಗೆ ಅವಕಾಶವಿರುತ್ತದೆ. ಖಾಸಗಿ ಆಸ್ಪತ್ರೆಗಳಲ್ಲಿ ಆಸ್ಪತ್ರೆಗಳ ನಿರ್ವಹಣೆ, ಮೂಲ ಸೌಕರ್ಯಗಳು, ತಜ್ಞ ವೈದ್ಯರಿಗೆ ಹೆಚ್ಚಿನ ವೇತನ ನೀಡಬೇಕಾಗಿರುವುದರಿಂದ ನಿಗದಿಪಡಿಸಿರುವ ದರಗಳಲ್ಲಿ ಚಿಕಿತ್ಸೆ ನೀಡಲು ಸಾಧ್ಯವಾಗುವುದಿಲ್ಲ. ನಿಗದಿಪಡಿಸಿರುವ ದರಗಳು Consumables ಗೆ ಸಾಕಾಗುವುದಿಲ್ಲವೆಂದು ಆಸ್ಪತ್ರೆಗಳ ಪರವಾಗಿ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಸರ್ಕಾರಕ್ಕೆ ಮತ್ತು ಯಶಸ್ವಿನಿ ಟ್ರಸ್ಟ್‌ಗೆ ಮನವಿಗಳನ್ನು ನೀಡಿ ಹೆಚ್ಚಿನ ಆಸ್ಪತ್ರೆಗಳು ಯಶಸ್ವಿನಿ ಯೋಜನೆಯಲ್ಲಿ ಪಾಲ್ಗೊಳ್ಳದಂತೆ ತಡೆಹಿಡಿದಿರುತ್ತಾರೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತುತ ಯಶಸ್ವಿನಿ ಯೋಜನೆಯ ಕೆಲವಾರು ಚಿಕಿತ್ಸೆ ದರಗಳು ಹಿಂದಿನ ಯಶಸ್ವಿನಿ ಯೋಜನೆಯ ದರಗಳಿಗಿಂತ ಕಡಿಮೆಯಿರುವುದನ್ನು ಸರ್ಕಾರವು ಪರಿಶೀಲಿಸಿ, ಎಲ್ಲೆಲ್ಲಿ ಪರಿಷ್ಕೃತ ಯಶಸ್ವಿನಿ ಯೋಜನೆಯ ದರಗಳು ಹಿಂದಿನ (ಅಂದರೆ 2018ರಲ್ಲಿ ಜಾರಿಯಲ್ಲಿದ್ದಂತೆ) ಯಶಸ್ವಿನಿ ಯೋಜನೆಯ ದರಗಳಿಗಿಂತ ಕಡಿಮೆಯಿರುತ್ತದೆಯೋ ಅಂತಹ ಚಿಕಿತ್ಸೆಗಳಿಗೆ ಮಾತ್ರ ಹಿಂದಿನ ಯಶಸ್ವಿನಿ ಯೋಜನೆಯ ದರಗಳನ್ನೇ ಅಳವಡಿಸಿಕೊಳ್ಳುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 02 ಸಿಎಲ್‌ಎಸ್ 2023, ಬೆಂಗಳೂರು, ದಿನಾಂಕ: 24-01-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2022-23ನೇ ಸಾಲಿನಿಂದ ಪ್ರಾರಂಭವಾಗಿರುವ ಯಶಸ್ವಿನಿ ಯೋಜನೆಗೆ ***ಪ್ರಸ್ತುತ ಅಳವಡಿಸಿಕೊಂಡಿರುವ ಆಯುಷ್ಮಾನ್ ಭಾರತ್ ಯೋಜನೆಯ ದರಗಳು, ಕೆಲವು ಚಿಕಿತ್ಸೆಗಳಿಗೆ ಹಿಂದಿನ (ಅಂದರೆ 2018ರಲ್ಲಿ ಜಾರಿಯಲ್ಲಿದ್ದಂತೆ) ಯಶಸ್ವಿನಿ ಯೋಜನೆಯ ದರಗಳಿಗಿಂತ ಎಲ್ಲೆಲ್ಲಿ ಕಡಿಮೆಯಿರುತ್ತದೆಯೋ ಅಂತಹ ಚಿಕಿತ್ಸೆಗಳಿಗೆ ಮಾತ್ರ ಹಿಂದಿನ ಯಶಸ್ವಿನಿ ಯೋಜನೆಯ ದರಗಳನ್ನೇ ಅಳವಡಿಸಿಕೊಳ್ಳಲು*** ಅನುಮತಿ ನೀಡಿ ಆದೇಶಿಸಿದೆ.

ಮಾನ್ಯ ಮುಖ್ಯಮಂತ್ರಿಯವರು ದಿನಾಂಕ: 21-01-2023 ರಂದು ನೀಡಿರುವ ಅನುಮೋದನೆಯಂತೆ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Radha H.C 24/1/23
**(ರಾಧ ಹೆಚ್.ಸಿ.)**
ಸರ್ಕಾರದ ಅಧೀನ ಕಾರ್ಯದರ್ಶಿ-3(ಪ್ರ),
ಸಹಕಾರ ಇಲಾಖೆ.

O/C
24-01-23

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರ 250 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿಗಳು:**

1. ಸರ್ಕಾರದ ಮುಖ್ಯಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ.
8. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
9. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಚಾಮರಾಜಪೇಟೆ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ, ಬೆಂಗಳೂರು.
12. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಅಧ್ಯಕ್ಷರು/ ವ್ಯವಸ್ಥಾಪಕ ನಿರ್ದೇಶಕರುಗಳು.
13. ರಾಜ್ಯದ ಸಹಕಾರ ಸಂಘಗಳ ಪ್ರಾಂತೀಯ ಜಂಟಿ ನಿಬಂಧಕರುಗಳು ಬೆಂಗಳೂರು/ ಮೈಸೂರು/ ಬೆಳಗಾವಿ/ ರಾಯಚೂರು.
14. ರಾಜ್ಯದ ಎಲ್ಲಾ ಸಹಕಾರ ಸಂಘಗಳ ಜಿಲ್ಲಾ ಉಪನಿಬಂಧಕರುಗಳು.
15. ರಾಜ್ಯದ ಎಲ್ಲಾ ಉಪ ವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು.
16. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
17. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು.
18. ವಿಶೇಷ ಕರ್ತವ್ಯಾಧಿಕಾರಿಗಳು ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿರವರ ಆಪ್ತಕಾರ್ಯದರ್ಶಿ, ಸಹಕಾರ ಇಲಾಖೆ.
19. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್.